ಶ್ರೀ ಜಿ. ಪುಟ್ಟಸ್ವಾಮಿ.—ಈ ಬಗರ್ ಹುಕುಂ ಸಾಗುವಳಿ ಜಮೀನನ್ನು ಹರಿಜನಗಿರಿಜನರಿಗೆ ಮತ್ತು ಏಕರ್ ಸೆಕ್ಷನ್ ಅವರಿಗೆ ಕೊಡುತ್ತೇವೆಂದು ಈ ಮಾನ್ಯ ಸಭೆಯಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಅದರಂತೆ ಇಲ್ಲಿ 2 ಎಕರೆ, 3 ಎಕರೆ ಸಾಗುವಳಿ ಮಾಡಿರುವವರ ಪಟ್ಟಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ತಾವು ಇದನ್ನು ಪರಿಶೀಲನೆ ಮಾಡಿ ಬಡವರಿಗೆ ಜಮೀನನ್ನು ರಿಲೀಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಆ ರೀತಿ ಭರವಸೆಯನ್ನು ಕೊಟ್ಟಂಥ ಸಂದರ್ಭ ನನಗಾದರೂ ಗಮನದಲ್ಲಿ ಇಲ್ಲ. ಈಗ ಅನ್‌ಆಥರೈಸ್ಡ್ ಆಗಿ ವ್ಯವಸಾಯ ಮಾಡಿರತಕ್ಕಂಥ ರೈತರಿಂದ ಜಮೀನನ್ನು ಬಿಡಿಸುತ್ತಿದ್ದೇವೆ. ಆದ್ದರಿಂದ ಈ ಪ್ರಶ್ನೆ ಬರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಅಲ್ಲಿ ಕೆಲವಾರು ವರ್ಷಗಳಿಂದ ಮರಗಳು ಇಲ್ಲ. ಅಲ್ಲಿ ರೈತರು ಸಾಗುವಳಿ ಮಾಡಿದ್ದಾರೆ. ಫಾರೆಸ್ಟ್ ಇಲಾಖೆಯವರಿಗೂ ಯಾವ ವಿಧವಾದ ತೊಂದರೆಯೂ ಇಲ್ಲದ್ದರಿಂದ ಅಲ್ಲಿ ಎರಡೆರಡು ಎಕರೆಗಳನ್ನು ಅವರಿಗೆ ಕೊಡುವುದರಲ್ಲಿ ಯಾರಿಗೂ ಅನ್ಯಾಯವಾಗುವುದಿಲ್ಲ. ಆದ್ದರಿಂದ ಈ ಬಡವರ ಹಿತದೃಷ್ಟಿಯಿಂದ ಇದನ್ನು ಪರಿಶೀಲನೆ ಮಾಡಿ ಜಮೀನನ್ನು ರಿಲೀಸ್ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಲ್ಲಿ ಮರ ಇಲ್ಲದಿದ್ದರೆ ಮರಗಳನ್ನು ನೆಡಿಸುತ್ತೇವೆ. ಅಲ್ಲಿ ಪಾಗ ಇದ್ದರೆ ಯಾರಿಗೂ ತೊಂದರೆಯಾಗುವುದಿಲ್ಲ. ಇಂತಹ ಲಕ್ಷಾಂತರ ಎಕರೆ ಜಮೀನು ದೇಶದಲ್ಲಿ ಇವೆ. ಆ ಜಮೀನನ್ನು ಒಬ್ಬೊಬ್ಬರಿಗೂ ಕೊಡುತ್ತಾ ಹೋದರೆ ಅದರಿಂದ ತೊಂದರೆಯಾಗುತ್ತದೆ. ಸರ್ಕಾರ ಈಗಾಗಲೇ ಕಾನೂನು ಮಾಡಿ ಎವಿಕ್ಟ್ ಮಾಡಿಸುತ್ತಿದ್ದಾರೆ.

9-30 A.M.

Disparity in Selling Rates of Fuel

128. SRI G. PUTTASWAMY(Mudigere)—Will the Minister of State for Forests be pleased to state:

(*a*) the rates at which the forest fuel is being sold by the Forest Department to the public in Chikkamagalur town ;

(*b*) whether it has come to the notice of the Government that the selling rate prescribed by them is too high ;

(*c*) whether the Government intends to reduce the said rate ;

(*d*) the rate at which the fuel is being sold at the depots of forest Department in Shimoga Town and other places ;

(*e*) the reason for the disparity in the selling rates of fuel from one district to the other ;

(*f*) whether the Government has tried to remove this disparity ?

SRI H. C. SRIKANTAIAH (Minister of State for Forests).—

(*a*) Rs. 105 per tonne.

(*b*) No.

(*c*) No.

(*d*) the rate in case of Shimoga Town Rs. 90-25 per tonne and in case of Bhadravathi Rs. 104 per tonne.

(*e*) the rate is based on the seigniorage rate of Rs. 25 per tonne PLUS cost of exploitation and supervision charges. The cost of exploitation varies depending on the lead from the forest.

(*f*) The reduction of the sale rate is under Government's consideration.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಶಿವಮೊಗ್ಗ ಮತ್ತು ಇತರ ಎಲ್ಲಾ ಕಡೆ ಕಡಿಮೆ ದರದಲ್ಲಿ ಸೌದೆ ವ್ಯಾಪಾರ ಮಾಡುತ್ತಿದ್ದು, ಚಿಕ್ಕಮಗಳೂರಿನಲ್ಲಿ ಜಾಸ್ತಿ ಬೆಲೆಯಾಗುವುದಕ್ಕೆ ಕಾರಣ ಏನು ?

† ಶ್ರೀ ಎಚ್. ಸಿ ಶ್ರೀಕಂಠಯ್ಯ.—ಅಧ್ಯಕ್ಷರೇ, ಈ ಸೌದೆ ರೇಟ್ ಎಲ್ಲಾ ಕಡೆಯೂ ಒಂದೆ. ಈ ಎಕ್ಸ್‌ಪ್ಲಾಯಿಟೇಷನ್ ಮತ್ತು ಟ್ರಾನ್ಸ್‌ಪೋರ್ಟೇಷನ್ ಜಾಸ್ತಿ ಬೀಳುವುದರಿಂದ ಚಿಕ್ಕಮಗಳೂರಿನಲ್ಲಿ 105 ರೂಪಾಯಿ ಮತ್ತು ಶಿವಮೊಗ್ಗದಲ್ಲಿ 90 ರೂಪಾಯಿ ಆಗಿದೆ. ನಾವು ವ್ಯಾಪಾರ ಮಾಡುವುದು ಒಂದೇ ದರ. ವ್ಯತ್ಯಾಸವೇನು ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಟೆಂಡರ್ ಕರೆಯುವಾಗ ಚಿಕ್ಕಮಗಳೂರಿನಲ್ಲಿ ಜಾಸ್ತಿ ರೇಟಿಗೆ ಒಪ್ಪಿಕೊಂಡು ಶಿವಮೊಗ್ಗದಲ್ಲಿ ಕಡಿಮೆ ರೇಟಿಗೆ ಒಪ್ಪಿಕೊಳ್ಳುವುದರಿಂದ ಶಿವಮೊಗ್ಗದಲ್ಲಿ ಕಡಿಮೆಯಾಗಿ ಚಿಕ್ಕಮಗಳೂರಿನಲ್ಲಿ ಜಾಸ್ತಿಯಾಗುತ್ತದೆ. ಆ ರೀತಿ ಮಾಡುವುದಕ್ಕೆ ಕಾರಣ ಏನು ?

ಶ್ರೀ ಎಚ್. ಸಿ ಶ್ರೀಕಂಠಯ್ಯ.—ನಾವು ಟೆಂಡರ್ ಕರೆಯುತ್ತಿಲ್ಲ. ನಮ್ಮ ಡಿಪೋನಿಂದಲೇ ಕೊಡುತ್ತಿದ್ದೇವೆ. ಸೀನಿಯರೇಜ್ ಕೊಟ್ಟು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ನಮ್ಮ ಡಿಪೋನಿಂದಲೇ ವ್ಯಾಪಾರ ಮಾಡತಕ್ಕ ವ್ಯವಸ್ಥೆ ಇದೆ.

ಶ್ರೀ ಜಿ ಪುಟ್ಟಸ್ವಾಮಿ.—ದರ ಕಡಿಮೆ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದು ಯಾವ ಹಂತದಲ್ಲಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಪರಿಶೀಲನೆ ಬರೂರು ಹಂತದಲ್ಲಿದೆ. ಅದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಸಿ ಬೈರೇಗೌಡ.—ರಾಜ್ಯದಲ್ಲಿ ಕೇವಲ 25 ರೂಪಾಯಿಗೆ 1 ಟನ್ನಿನಂತೆ ಕೆಲವರಿಗೆ ವ್ಯಾಪಾರ ಮಾಡಿರುವುದು ನಿಜವೆ ?

ಶ್ರೀ ಎಚ್. ಸಿ ಶ್ರೀಕಂಠಯ್ಯ.—ಸೀನಿಯರೇಜ್ ರೇಟಿನಲ್ಲಿ ಎಲ್ಲರಿಗೂ ಅರಣ್ಯ ಇಲಾಖೆಯವರು ಸೌದೆ ವ್ಯಾಪಾರ ಮಾಡುತ್ತಿದ್ದಾರೆ. 25 ರೂಪಾಯಿಗೆ ಒಂದು ಟನ್ ಸೌದೆ ಕೊಡುತ್ತಾ ಇಲ್ಲ.

ಶ್ರೀ ಸಿ ಬೈರೇಗೌಡ.—25 ರೂಪಾಯಿಗೆ ಒಂದು ಟನ್ನಿನಂತೆ ಬಿಲ್ಲಾ ಅವರಿಗೆ ಮಾಡುತ್ತಾ ಇರುವುದು ನಿಜವಲ್ಲವೇ ಸ್ವಾಮಿ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದು ಸೌದೆ ಅಲ್ಲ.

Use of 'Harrow' implement in some areas of the State

186. SRI B. M. HORAKERE (Guledgud). Will the Minister for Agriculture be pleased to state :—

(*a*) whether Government is aware that in different areas having different ecological and climatic conditions, different types of agricultural implements, bullock drawn and hand operated implements, are being used ;